# ಕರ್ನಾಟಕ ವಿಧಾನ ಪರಿಷತ್ತು
## (153ನೇ ಅಧಿವೇಶನ)

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 600(735) |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | **22.07.2024** |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಶ್ರೀಗಂಧ ಬೆಳೆಯಲು ಮತ್ತು ಮಾರಾಟ ಮಾಡಲು ಅರಣ್ಯ ಇಲಾಖೆಯ ಅನುಮತಿ ಅಗತ್ಯವಿದೆಯೇ: ಅಗತ್ಯವಿದ್ದಲ್ಲಿ ಈ ಸಂಬಂಧ ಇಲಾಖೆಯ ರೂಪಿಸಿರುವ ನಿಯಮಗಳೇನು; ಹೆಚ್ಚು ಶ್ರೀಗಂಧ ಬೆಳೆಯಲು ಅರಣ್ಯ ಇಲಾಖೆಯ ಪ್ರೋತ್ಸಾಹ ನೀಡುತ್ತಿದೆಯೇ: ನೀಡುತ್ತಿದ್ದಲ್ಲಿ. ಈ ಸಂಬಂಧ ಇಲಾಖೆಯು ರೂಪಿಸಿರುವ ಕಾರ್ಯಕ್ರಮಗಳೇನು; (ಸಂಪೂರ್ಣ ವಿವರವನ್ನು ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಶ್ರೀಗಂಧ ಬೆಳೆಯಲು ಅರಣ್ಯ ಇಲಾಖೆಯ ಅನುಮತಿ ಅಗತ್ಯವಿರುವುದಿಲ್ಲ. ಆದ ಕಾರಣ ನಿಯಮ ರೂಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಶ್ರೀಗಂಧ ಸಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸಲು ರೈತರಿಗೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನಿಯಮಾನುಸಾರ ಪ್ರೋತ್ಸಾಹ ಧನ ಪಾವತಿಸುವ ಮೂಲಕ ಉತ್ತೇಜಿಸಲಾಗುತ್ತಿದೆ. ಈ ಯೋಜನೆಯಡಿ ರೈತರು ಸಸಿಗಳನ್ನು ರಿಯಾಯಿತಿ ದರದಲ್ಲಿ ಪಡೆದು, ರೂ.10/- ಪಾವತಿಸಿ ಸದರಿ ಯೋಜನೆಗೆ ನೋಂದಾಯಿಸಿಕೊಂಡಲ್ಲಿ ಅವರು ಅವರ ಜಮೀನಿನಲ್ಲಿ ಬೆಳೆದಂತಹ ಸಸಿಗಳಿಗೆ ಪ್ರತಿ ಬದುಕುಳಿದ ಸಸಿಗೆ ಮೂರು ವರ್ಷಗಳಲ್ಲಿ ರೂ.125/-ಗಳನ್ನು ಪಾವತಿಸಲಾಗುತ್ತದೆ (1ನೇ ವರ್ಷ ರೂ.35/-, 2ನೇ ವರ್ಷ ರೂ.40/- ಮತ್ತು 3ನೇ ವರ್ಷ ರೂ.50/-)<br>ಶ್ರೀಗಂಧ ಮಾರಾಟ ನಿಯಮಗಳ ಬಗ್ಗೆ ವಿವರವನ್ನು ಉಪ ಪ್ರಶ್ನೆ (ಇ)ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದ ರೈತರಿಗೆ ಅರಣ್ಯ ಇಲಾಖೆಯಿಂದ ಶ್ರೀಗಂಧದ ಸಸಿಗಳನ್ನು ಸರಬರಾಜು ಮಾಡಲಾಗುತ್ತಿದೆಯೇ: ಇಲ್ಲದಿದ್ದಲ್ಲ, ಯಾರು ಸರಬರಾಜು ಮಾಡಲಾಗುತ್ತಿದೆಯೇ; ಇಲ್ಲದಿದ್ದಲ್ಲ, ಯಾರು ಸರಬರಾಜು ಮಾಡುತ್ತಿದ್ದಾರೆ; ಪ್ರತೀ ಸಸಿಗೆ ತಗಲುವ ವೆಚ್ಚವೆಷ್ಟು: ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ವಿಸ್ತೀರ್ಣದಲ್ಲಿ ಶ್ರೀಗಂಧ ಬೆಳೆಯಲಾಗಿದೆ: ಎಷ್ಟು ಜನ ಬೆಳೆಗಾರರಿದ್ದಾರೆ: (ಜಿಲ್ಲಾವಾರು ಮಾಹಿತಿ ನೀಡುವುದು) | ಇಲಾಖೆಯ ಸಸ್ಯಕ್ಷೇತ್ರಗಳಲ್ಲಿ ಬೇಡಿಕೆಯನುಸಾರ ಅನುದಾನದ ಲಭ್ಯತೆಯ ಮೇರೆಗೆ ಬೆಳೆದಂತಹ ಶ್ರೀಗಂಧದ ಸಸಿಗಳನ್ನು ರೈತರಿಗೆ ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ 8"X12" ಅಳತೆಯ ಪ್ರತಿ ಸಸಿಯನ್ನು ರಿಯಾಯಿತಿ ದರ ರೂ.6/-ರಂತೆ ಮಾರಾಟ ಮಾಡಲಾಗುತ್ತಿದೆ. 2024-25ನೇ ಸಾಲಿನಲ್ಲಿ ಪ್ರತಿ ಶ್ರೀಗಂಧದ ಸಸಿಗೆ ರೂ.31.20ಗಳಷ್ಟು ವೆಚ್ಚವಾಗುತ್ತದೆ. ರಾಜ್ಯದಲ್ಲಿ 2018-19 ರಿಂದ 2023ರವರೆಗೆ ಶ್ರೀಗಂಧ ಸಸಿಗಳನ್ನು ಬೆಳೆಸಿರುವ ವಿಸ್ತೀರ್ಣ ಹಾಗೂ ಶ್ರೀಗಂಧ ಸಸಿಗಳ ಬೆಳೆಗಾರರ ಸಂಖ್ಯೆ ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಿದೆ. |
| ಇ) | ಕಟಾವಿಗೆ ಬಂದ ಶ್ರೀಗಂಧಕ್ಕೆ ಮಾರುಕಟ್ಟೆಯಲ್ಲಿ ಲಭ್ಯವಿರುವ ದರವೆಷ್ಟು: ಅದಕ್ಕೆ, ಅರಣ್ಯ ಇಲಾಖೆ ಮತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ನಿಗಮವು ನಿಗದಿಪಡಿಸಿರುವ ಬೆಲೆ ಎಷ್ಟು: (ಕಳೆದ 5 ವರ್ಷಗಳ ಮಾಹಿತಿ ನೀಡುವುದು) | 2019-20 ರಿಂದ 2023-24ನೇ ಸಾಲಿನವರೆಗೆ ಪ್ರತಿಯೊಂದು ಶ್ರೀಗಂಧ ವರ್ಗಕ್ಕೆ ಸರ್ಕಾರವು ಚಿಲ್ಲರೆ ಮಾರಾಟ ದರಗಳನ್ನು ನಿಗಧಿಪಡಿಸಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಅಪಜೀ 05 ಎಫ್‌ಎಸ್‌ಡಬ್ಲ್ಯೂ 2016, ದಿನಾಂಕ: 24.09.2018ರ ಮತ್ತು ಸರ್ಕಾರದ ಆದೇಶ ಸಂಖ್ಯೆ : ಅಪಜೀ 11 ಎಫ್‌ಎಸ್‌ಡಬ್ಲ್ಯೂ 2020, ದಿನಾಂಕ: 10.03.2021ನ್ನು **ಅನುಬಂಧ-2ರಲ್ಲಿ** ಒದಗಿಸಿದೆ. |

| | | |
|---|---|---|
| | | ಅರಣ್ಯ ಇಲಾಖೆಯು ಮೈಸೂರು, ಶಿವಮೊಗ್ಗ ಮತ್ತು ಧಾರವಾಡದಲ್ಲಿರುವ ಸರ್ಕಾರಿ ಶ್ರೀಗಂಧ ಕೋಠಿಗಳಲ್ಲಿ ಲಭ್ಯವಿರುವ ಶ್ರೀಗಂಧದ ವಿವಿಧ ವರ್ಗಗಳ ದಾಸ್ತಾನನ್ನು ಎಂ.ಎಸ್.ಟಿ.ಸಿ. ಇ-ಪೋರ್ಟಲ್‌ನಲ್ಲಿ ಇ-ಹರಾಜು ಮೂಲಕ ವಿಲೇ ಮಾಡಲಾಗುತ್ತದೆ. ಸದರಿ ಇ-ಹರಾಜಿನಲ್ಲಿ ಲಭ್ಯವಾಗುವ ಶ್ರೀಗಂಧದ ವಿವಿಧ ವರ್ಗಗಳ ಮಾರುಕಟ್ಟೆ ದರದ ಸರಾಸರಿ ದರಗಳನ್ನು ಆಧರಿಸಿ ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108ರನ್ವಯ ಸರ್ಕಾರವು ಚಿಲ್ಲರೆ ಮಾರಾಟ ದರಗಳನ್ನು ನಿಗಧಿಪಡಿಸುತ್ತದೆ.<br><br>ಶ್ರೀಗಂಧ ಮರಗಳ ಮಾಲೀಕರು ಶ್ರೀಗಂಧ ಮರಗಳನ್ನು ಸರ್ಕಾರಿ ಶ್ರೀಗಂಧದ ಕೋಠಿಗೆ ನೀಡಿದಾಗ, ಶ್ರೀಗಂಧ ಮರವನ್ನು ವಿವಿಧ ವರ್ಗಗಳಾಗಿ ಪರಿವರ್ತಿಸಿದ ನಂತರ ಪ್ರತಿಯೊಂದು ವರ್ಗಕ್ಕೆ ಸರ್ಕಾರವು ನಿಗಧಿಪಡಿಸಿರುವ ದರಗಳನ್ವಯ ಅದರ ಒಟ್ಟು ಮೌಲ್ಯವನ್ನು ನಿಗಧಿಪಡಿಸಲಾಗುತ್ತದೆ.<br><br>ಈ ಸಂದರ್ಭದಲ್ಲಿ ವಿವಿಧ ವರ್ಗಗಳ ಶ್ರೀಗಂಧದ ಒಟ್ಟು ಮೌಲ್ಯದಲ್ಲಿ, ಸರ್ಕಾರದ ಪಾಲು ಶೇಕಡ ಹತ್ತು ಮೇಲ್ವಿಚಾರಣೆ ವೆಚ್ಚ, ಶ್ರೀಗಂಧ ಕೋಠಿಯಲ್ಲಿ ಪರಿವರ್ತನೆಗೆ ತಗಲುವ ವೆಚ್ಚ ಮತ್ತು ಒಂದು ವೇಳೆ ಇಲಾಖಾ ವತಿಯಿಂದ ಶ್ರೀಗಂಧ ಮರಗಳನ್ನು ರೈತರ ಜಮೀನಿನಿಂದ ಡಿಪೋಗೆ ಸಾಗಾಣಿಕೆ ಮಾಡಿದಲ್ಲಿ ಅದಕ್ಕೆ ತಗಲುವ ಸಾಗಾಣಿಕೆ ವೆಚ್ಚವನ್ನು ಕಡಿದು, ಉಳಿದ ಮೌಲ್ಯವನ್ನು ಶ್ರೀಗಂಧ ಮರಗಳ ಮಾಲೀಕರಿಗೆ ಪಾವತಿಸಲಾಗುತ್ತದೆ.<br><br>ಆದಾಗ್ಯೂ, ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 46 ಎಫ್‌ಡಿಪಿ 2022, ದಿನಾಂಕ: 31.12.2022ರಲ್ಲಿ, ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108(1)ರ ತಿದ್ದುಪಡಿ ಮಾಡಲಾಗಿದ್ದು, ಅದರನ್ವಯ, ರಾಜ್ಯದಲ್ಲಿ ಶ್ರೀಗಂಧ ಮರದ ಮಾಲೀಕರು ಶ್ರೀಗಂಧ ಮರಗಳನ್ನು ಇತರೆ ಯಾವುದೇ ಘಟಕಕ್ಕೂ (any other entity) ಇಚ್ಛಿಸುವ ದರಗಳನ್ವಯ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು 2019-20 ರಿಂದ 2023-24ನೇ ಸಾಲಿನವರೆಗೆ ಪ್ರತಿಯೊಂದು ಶ್ರೀಗಂಧ ವರ್ಗಕ್ಕೆ ನಿಗಧಿಪಡಿಸಿದ ದರಗಳ ವಿವರಗಳನ್ನು ನಿಗಮವು ನೀಡಿರುವ ಮಾಹಿತಿಯನ್ನು **ಅನುಬಂಧ-3ರಲ್ಲಿ** ಒದಗಿಸಿದೆ. |
| ಈ) | ಶ್ರೀಗಂಧಕ್ಕೆ ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಇದ್ದರೂ ಅರಣ್ಯ ಇಲಾಖೆಯು ಅತ್ಯಂತ ಕಡಿಮೆ ಬೆಲೆ ನಿಗದಿ ಮಾಡಿ ರೈತರಿಗೆ ಅನ್ಯಾಯ ಮಾಡುತ್ತಿರುವ ಆರೋಪಗಳು ಕೇಳಿ | ಅರಣ್ಯ ಇಲಾಖೆಯು ಮೈಸೂರು, ಶಿವಮೊಗ್ಗ ಮತ್ತು ಧಾರವಾಡದಲ್ಲಿರುವ ಸರ್ಕಾರಿ ಶ್ರೀಗಂಧ ಕೋಠಿಗಳಲ್ಲಿ ಲಭ್ಯವಿರುವ ಶ್ರೀಗಂಧದ ವಿವಿಧ ವರ್ಗಗಳ ದಾಸ್ತಾನನ್ನು ಎಂ.ಎಸ್.ಟಿ.ಸಿ. ಇ-ಪೋರ್ಟಲ್‌ನಲ್ಲಿ ಇ-ಹರಾಜು |

| | | |
|---|---|---|
| | ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು) | ಮೂಲಕ ವಿಲೇ ಮಾಡಲಾಗುತ್ತದೆ. ಸದರಿ ಇ-ಹರಾಜಿನಲ್ಲಿ ಲಭ್ಯವಾಗುವ ಶ್ರೀಗಂಧದ ವಿವಿಧ ವರ್ಗಗಳ ಮಾರುಕಟ್ಟೆ ದರದ ಸರಾಸರಿ ದರಗಳನ್ನು ಆಧರಿಸಿ ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108ರನ್ವಯ ಸರ್ಕಾರವು ಚಿಲ್ಲರೆ ಮಾರಾಟ ದರಗಳನ್ನು ನಿಗಧಿಪಡಿಸುತ್ತದೆ.<br><br>ಶ್ರೀಗಂಧಕ್ಕೆ ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಇದ್ದರೂ ಅರಣ್ಯ ಇಲಾಖೆಯು ಅತ್ಯಂತ ಕಡಿಮೆ ಬೆಲೆ ನಿಗದಿ ಮಾಡಿ ರೈತರಿಗೆ ಅನ್ಯಾಯ ಮಾಡುತ್ತಿರುವ ಆರೋಪಗಳು ಕೇಳಿ ಬಂದಿರುವುದಿಲ್ಲ.<br><br>ಆದಾಗ್ಯೂ, ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 46 ಎಫ್‌ಡಿಪಿ 2022, ದಿನಾಂಕ: 31.12.2022ರಲ್ಲಿ ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108(1)ರ ತಿದ್ದುಪಡಿ ಮಾಡಲಾಗಿದ್ದು, ಅದರನ್ವಯ, ರಾಜ್ಯದಲ್ಲಿ ಶ್ರೀಗಂಧ ಮರದ ಮಾಲೀಕರು ಶ್ರೀಗಂಧ ಮರಗಳನ್ನು ಇತರೆ ಯಾವುದೇ ಘಟಕಕ್ಕೂ (any other entity) ಇಚ್ಛಿಸುವ ದರಗಳನ್ವಯ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. |

ಸಂಖ್ಯೆ: ಅಪಜೀ 31 ಎಫ್‌ಡಿಪಿ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.

ಅನುಬಂಧ – 1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ.ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 600(735)ರ

ಪ್ರಶ್ನೆ ಸಂಖ್ಯೆ: ಆ)ರಲ್ಲಿ - ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ವಿಸ್ತೀರ್ಣದಲ್ಲಿ ಶ್ರೀಗಂಧ ಬೆಳೆಯಲಾಗಿದೆ; ಎಷ್ಟು ಜನ ಬೆಳೆಗಾರರಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು) ಎಂಬುದಕ್ಕೆ ಉತ್ತರ.

| ಕ್ರ. ಸಂ. | ಜಿಲ್ಲೆ | 2018 ರಿಂದ 2023ರವರೆಗೆ ಶ್ರೀಗಂಧದ ನೆಡುತೋಪು ಬೆಳೆಸಲಾದ ವಿಸ್ತೀರ್ಣ (ಹೆ). | | ಶ್ರೀಗಂಧ ಬೆಳೆಗಾರರ ಸಂಖ್ಯೆ |
|---|---|---|---|---|
| | | ಅರಣ್ಯ ಪ್ರದೇಶದಲ್ಲಿ | ಖಾಸಗಿ ಜಮೀನಿನಲ್ಲಿ | |
| 1 | ಬೆಂಗಳೂರು ನಗರ | - | 30.43 | 69 |
| 2 | ಬೆಂಗಳೂರು ಗ್ರಾಮಾಂತರ | | 233.00 | 295 |
| 3 | ಕೋಲಾರ | 448.00 | 251.56 | 813 |
| 4 | ಚಿಕ್ಕಬಳ್ಳಾಪುರ | 100.00 | 239.35 | 631 |
| 5 | ರಾಮನಗರ | 25.00 | 131.69 | 380 |
| 6 | ಬೆಳಗಾವಿ | 50.00 | 164.52 | 304 |
| 7 | ಬಾಗಲಕೋಟೆ | - | 134.63 | 183 |
| 8 | ವಿಜಯಪುರ | - | 411.66 | 810 |
| 9 | ಚಿತ್ರದುರ್ಗ | 35.00 | - | - |
| 10 | ದಾವಣಗೆರೆ | 174.40 | 17.38 | 12 |
| 11 | ಕೊಪ್ಪಳ | 32.00 | 28.50 | 57 |
| 12 | ವಿಜಯಪುರ | 35.00 | 15.00 | 36 |
| 13 | ಬಳ್ಳಾರಿ | - | 38.77 | 108 |
| 14 | ಚಾಮರಾಜನಗರ | 188.64 | - | - |
| 15 | ಚಿಕ್ಕಮಗಳೂರು | 712.10 | 14.14 | 10 |
| 16 | ಧಾರವಾಡ | 50.00 | 183.00 | 127 |
| 17 | ಗದಗ | - | - | - |
| 18 | ಹಾವೇರಿ | 50.00 | 43.00 | 51 |
| 19 | ಹಾಸನ | 146.50 | | 306 |
| 20 | ತುಮಕೂರು | 162.00 | 1,419.00 | 1,818 |
| 21 | ಬೀದರ | 50.00 | 132.59 | 134 |
| 22 | ಕಲಬುರಗಿ | - | - | - |
| 23 | ರಾಯಚೂರು | - | - | 188 |
| 24 | ಯಾದಗಿರ | - | - | - |
| 25 | ಉತ್ತರ ಕನ್ನಡ | - | - | - |
| 26 | ಕೊಡಗು | - | - | - |
| 27 | ದಕ್ಷಿಣ ಕನ್ನಡ | - | 2.00 | 1 |
| 28 | ಉಡುಪಿ | - | - | - |
| 29 | ಮೈಸೂರು | 150.00 | 16.00 | 16 |
| 30 | ಮಂಡ್ಯ | 120.00 | - | - |
| 31 | ಶಿವಮೊಗ್ಗ | 375.00 | 28.04 | 56 |
| | **ಒಟ್ಟು** | **2,903.64** | **3,534.26** | **6,405** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅಭಿವೃದ್ಧಿ), ಬೆಂಗಳೂರು.

ಅನುಬಂಧ-2

S-270830

9/

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** :- ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ಪರಿಷ್ಕರಿಸಿ ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ** :- 1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 05 ಎಫ್ಎಸ್ಡಬ್ಲ್ಯೂ 2016 ದಿನಾಂಕ: 04.07.2016.

2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಅಪಜೀ 05 ಎಫ್ಎಸ್ಡಬ್ಲ್ಯೂ 2016 ದಿನಾಂಕ: 03.09.2016.

3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಪತ್ರ ಸಂಖ್ಯೆ: ಬಿ3/ಶ್ರೀಗಂಧ/ಸಿಆರ್-88/2012-13 ದಿನಾಂಕ: 08.05.2018.

1 OCT 2018

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಸರ್ಕಾರದ ಆದೇಶ/ತಿದ್ದುಪಡಿ ಆದೇಶಗಳಲ್ಲಿ 2015-16ನೇ ಸಾಲಿಗೆ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಪರಿಷ್ಕರಿಸಿ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

ಅಪರ ಪ್ರಧಾನ ಮುಖ್ಯ ಅರಣ್ಯ ... ಅರಣ್ಯ ಸಂರಕ್ಷಣಾಧಿಕಾರಿ ... ಅರಣ್ಯ ಭವನ, ಬೆಂಗಳೂರು - 560 003.
3 OCT 2018

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರು ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ 99 ರ ಉಪ ನಿಯಮ 1(ಬಿ) ರ ಪ್ರಕಾರ ಸರ್ಕಾರವು ಪ್ರತಿವರ್ಷ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ಪರಿಷ್ಕರಿಸಿ ನಿಗದಿಪಡಿಸಬೇಕಿರುವ ಬಗ್ಗೆ ತಿಳಿಸುತ್ತಾ, 2015-16 ರಿಂದ 2017-18 ಸಾಲುಗಳ ನಡುವೆ ರಾಜ್ಯದ ಮೈಸೂರು, ಶಿವಮೊಗ್ಗ ಮತ್ತು ಧಾರವಾಡದ ಸರ್ಕಾರಿ ಡಿಪೋಗಳಲ್ಲಿ ಶ್ರೀಗಂಧದ ಮರಗಳ ಮಾರಾಟಕ್ಕಾಗಿ ನಡೆದ ಇ-ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಪಡೆದ ದರ ಮತ್ತು ಚಾಲ್ತಿಯಲ್ಲಿರುವ ದರಗಳನ್ನು ಹೋಲಿಸಿ, ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ಪರಿಷ್ಕೃತ ದರಗಳನ್ನು ಪ್ರಸ್ತಾಪಿಸಿರುತ್ತಾರೆ ಮತ್ತು ದಿನಾಂಕ:01-06-2018ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ಶ್ರೀಗಂಧದ ಮರಗಳ ಚಿಲ್ಲರೆ ಮಾರಾಟ ದರಗಳನ್ನು ಪರಿಷ್ಕರಿಸಿ ಆದೇಶಿಸುವಂತೆ ಕೋರಿರುತ್ತಾರೆ. ಈ ದರಗಳು ಕರ್ನಾಟಕ ಅರಣ್ಯ ಕೈಪಿಡಿಯ ಕಂಡಿಕೆ 97 (10)ರ ಅನ್ವಯ ದೇವಸ್ಥಾನ ಮತ್ತು ಧಾರ್ಮಿಕ ಸಂಘ-ಸಂಸ್ಥೆಗಳಿಗೆ ಪೂರೈಕೆಯಾಗುವ ಶ್ರೀಗಂಧದ ಮರಗಳಿಗೆ ಅನ್ವಯವಾಗುವುದಿಲ್ಲ ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 05 ಎಫ್ಎಸ್ಡಬ್ಲ್ಯೂ 2016 ದಿನಾಂಕ:24.09.2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಅರಣ್ಯ ಕೈಪಿಡಿ, 1976ರ ಕಂಡಿಕೆ 97 (1)ರಡಿ ಬರುವ ದೇವಸ್ಥಾನ ಮತ್ತು ಧಾರ್ಮಿಕ ಸಂಘ-ಸಂಸ್ಥೆಗಳಿಗೆ ಪೂರೈಕೆಯಾಗುವ ಶ್ರೀಗಂಧದ ಮರಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಪ್ರಕರಣಗಳಲ್ಲಿ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಪರಿಷ್ಕರಿಸಿ ನಿಗದಿಪಡಿಸಲಾಗಿದೆ.

| ಕ್ರಸಂ | ಶ್ರೀಗಂಧದ ವರ್ಗ | ಪ್ರಸ್ತುತ ದರ ರೂ.ಗಳಲ್ಲಿ (ಪ್ರತಿ ಕೆಜಿಗೆ) | ಪರಿಷ್ಕೃತ ದರ ರೂ.ಗಳಲ್ಲಿ (ಪ್ರತಿ ಕೆಜಿಗೆ) |
|---|---|---|---|
| A | **HEART WOOD** | | |
| 1 | Vilayetbudh (Billets-1) | 10,285.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |

| | | | |
|---|---|---|---|
| 2 | Chinnabudh (Billets-II) | 10,897.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| 3 | Panjam (Billets-III) | 9,877.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| 4 | Ghotla | 6,410.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| 5 | Ghatabadla | 9,137.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| 6 | Bagardad | 8,792.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| 7 | Roots-I | 4,920.00 | 5,576.00 |
| 8 | Roots-II | 4,980.00 | 5,502.00 |
| 9 | Roots-III | 5,100.00 | 8,200.00 |
| 10 | Jajpokal-I | 10,939.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| 11 | Jajpokal-II | 10,388.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| 12 | Ainbagar | 7,150.00 | 8,827.00 |
| 13 | Cheriya | 4,350.00 | 4,829.00 |
| 14 | Ani Chilta | 4,569.00 | 5,020.00 |
| 15 | Hatri Chilta | 2,585.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| **B** | **MIXED WOOD** | | |
| 16 | Milvachilta | 2153.00 | 2802.00 |
| 17 | Basola buini | 1728.00 | 3517.00 |
| 18 | Sawdust | 750.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |
| **C** | **SAP WOOD** | | |
| 19 | White chips | 80.00 | 89.00 |
| 20 | Bark & Waste | 24.00 | ಚಾಲ್ತಿಯಲ್ಲಿರುವ ದರಗಳನ್ನೇ ಮುಂದುವರೆಸಿದೆ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. J. Jwalakumari
(ಬಿ.ಜೆ.ಜ್ವಾಲಾಕುಮಾರಿ) 24/9/18
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ ಹಾಗೂ 300 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003 ಇವರಿಗೆ ಒದಗಿಸಲು ಕೋರಲಾಗಿದೆ.

<u>ಪ್ರತಿಗಳು:-</u>

1. ಮಹಾಲೇಖಪಾಲರು (ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಸಂಪನ್ಮೂಲ ನಿರ್ವಹಣೆ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ವನ ವಿಕಾಸ, ಮಲ್ಲೇಶ್ವರಂ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ವನ ವಿಕಾಸ ಮಲ್ಲೇಶ್ವರಂ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಎಂ.ಜಿ.ರೋಡ್, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ರಾಜಾಜಿನಗರ, ಬೆಂಗಳೂರು.
9. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಸಂಪನ್ಮೂಲ ನಿರ್ವಹಣೆ/territorial circles) /ಉಪ ಅರಣ್ಯ ಸಂರಕ್ಷಣಾಧಿಕಾರಿ(territorial divisions)(ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಸಂಪನ್ಮೂಲ ನಿರ್ವಹಣೆ) ರವರ ಮುಖಾಂತರ.
10. ಎಲ್ಲಾ ಶ್ರೀಗಂಧದ ಕೋಠಿಗಳು/ಸಂಗ್ರಹಾಲಯಗಳು/ಡಿಪೋಗಳು(ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ ನಿರ್ವಹಣೆ) ರವರ ಮುಖಾಂತರ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ಪರಿಷ್ಕರಿಸಿ ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 05 ಎಫ್‌ಎಸ್‌ಡಬ್ಲ್ಯೂ 2016, ದಿನಾಂಕ: 24.09.2018
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಪತ್ರ ಸಂಖ್ಯೆ: ಎಪಿಸಿಸಿಎಫ್(ಎಫ್‌ಆರ್‌ಎಂ) ಬಿ3/ಶ್ರೀಗಂಧ /ಸಿಆರ್-88/2012-2013, ದಿನಾಂಕ: 12.11.2020

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ, ರಾಜ್ಯದಲ್ಲಿ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ತಕ್ಷಣದಿಂದ ಅಂದರೆ ದಿನಾಂಕ:24-09-2018 ರಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರು ಕರ್ನಾಟಕ ಅರಣ್ಯ ನಿಯಮ, 1969ರ ನಿಯಮ 99 ರ ಉಪ ನಿಯಮ 1(ಬಿ) ರ ಪ್ರಕಾರ ಸರ್ಕಾರವು ಪ್ರತಿ ವರ್ಷ ಶ್ರೀಗಂಧದ ಚಿಲ್ಲರೆ ಮಾರಾಟ ದರಗಳನ್ನು ಪರಿಷ್ಕರಿಸಿ ನಿಗದಿಪಡಿಸಬೇಕಿರುವ ಬಗ್ಗೆ ತಿಳಿಸಿ, ಅದರನ್ವಯ 2018-2020 ಸಾಲುಗಳ ನಡುವೆ ರಾಜ್ಯದ ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಸರ್ಕಾರಿ ಶ್ರೀಗಂಧದ ಡಿಪೋಗಳಲ್ಲಿ, ಶ್ರೀಗಂಧದ ಮರಗಳ ಮಾರಾಟಕ್ಕಾಗಿ ಎಂ.ಎಸ್.ಟಿ.ಸಿ ಪೋರ್ಟಲ್ ನಲ್ಲಿ ನಡೆದ ಇ-ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಪಡೆದ ದರಗಳನ್ನು ಸಂಗ್ರಹಿಸಿ ಮತ್ತು ಚಾಲ್ತಿಯಲ್ಲಿರುವ ದರಗಳೊಂದಿಗೆ ಸಂಯೋಜಿಸಿ, ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ಪರಿಷ್ಕೃತ ದರಗಳನ್ನು ಪ್ರಸ್ತಾಪಿಸಿರುತ್ತಾರೆ ಮತ್ತು ದಿನಾಂಕ:01-12-2020 ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ಶ್ರೀಗಂಧದ ಮರಗಳ ಚಿಲ್ಲರೆ ಮಾರಾಟ ದರಗಳನ್ನು ಪರಿಷ್ಕರಿಸಿ ಆದೇಶಿಸುವಂತೆ ಕೋರಿರುತ್ತಾರೆ. ಈ ದರಗಳು ಕರ್ನಾಟಕ ಅರಣ್ಯ ಕೈಪಿಡಿಯ ಕಂಡಿಕೆ 97(10) ರ ಅನ್ವಯ ದೇವಸ್ಥಾನ ಮತ್ತು ಧಾರ್ಮಿಕ ಸಂಘ-ಸಂಸ್ಥೆಗಳಿಗೆ ಪೂರೈಕೆಯಾಗುವ ಶ್ರೀಗಂಧದ ಮರಗಳಿಗೆ ಅನ್ವಯವಾಗುವುದಿಲ್ಲ ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 11 ಎಫ್‌ಎಸ್‌ಡಬ್ಲ್ಯೂ 2020**
**ಬೆಂಗಳೂರು ದಿನಾಂಕ: 10.03.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಅರಣ್ಯ ಕೈಪಿಡಿಯ ಕಂಡಿಕೆ 97(1) ರಡಿ ಬರುವ ದೇವಸ್ಥಾನ ಮತ್ತು ಧಾರ್ಮಿಕ ಸಂಘ-ಸಂಸ್ಥೆಗಳಿಗೆ ಪೂರೈಕೆಯಾಗುವ ಶ್ರೀಗಂಧದ ಮರಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಪ್ರಕರಣಗಳಲ್ಲಿ ಶ್ರೀಗಂಧದ ವಿವಿಧ ವರ್ಗಗಳ ಚಿಲ್ಲರೆ ಮಾರಾಟ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಈ ಕೆಳಗಿನಂತೆ ಪರಿಷ್ಕರಿಸಿ ನಿಗದಿಪಡಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಶ್ರೀಗಂಧದ ವರ್ಗ | ಪ್ರಸ್ತುತ ದರ ರೂ.ಗಳಲ್ಲಿ (ಪ್ರತಿ ಕೆ.ಜಿ.ಗೆ) | ಪರಿಷ್ಕೃತ ದರ ರೂ.ಗಳಲ್ಲಿ (ಪ್ರತಿ ಕೆ.ಜಿ.ಗೆ) |
|---|---|---|---|
| **A** | **HEART WOOD** | | |
| 1 | Vilayetbudh (Billets-I) | 10285.00 | **12200.00** |

...2...

12 MAR 2021

To be communicated immediately to all concerned

| | | | |
|---|---|---|---|
| 2 | Chinnabudh (Billets- II) | 10897.00 | **10900.00** |
| 3 | Panjam (Billets- III) | 9877.00 | **10000.00** |
| 4 | Gotla | 6410.00 | **7000.00** |
| 5 | Ghatabadla | 9137.00 | **12700.00** |
| 6 | Bagardad | 8792.00 | **10900.00** |
| 7 | Roots - I | 5576.00 | **9700.00** |
| 8 | Roots - II | 5502.00 | **8300.00** |
| 9 | Roots - III | 8200.00 | **8500.00** |
| 10 | Jajpokal - I | 10939.00 | **13700.00** |
| 11 | Jajpokal - II | 10388.00 | **10600.00** |
| 12 | Ainbagar | 8827.00 | **8900.00** |
| 13 | Cheriya | 4829.00 | **5500.00** |
| 14 | Ain Chilta | 5020.00 | **5400.00** |
| 15 | Hatri Chilta | 2585.00 | **2850.00** |
| **B** | **MIXED WOOD** | | |
| 16 | Milvachilta | 2802.00 | **3400.00** |
| 17 | Basola buini | 3517.00 | **3600.00** |
| 18 | Sawdust | 750.00 | **810.00** |
| **C** | **SAP WOOD** | | |
| 19 | White chips | 89.00 | **105.00** |
| 20 | Bark and Waste | 24.00 | **25.00** |

...3....

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ.ಆಇ/631/ವೆಚ್ಚ-5/2020 ದಿನಾಂಕ: 11.12.2020 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಂ. ಎಸ್. ಲೀಲಾವತಿ 10/03/2021
(ಎಂ.ಎಸ್.ಲೀಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಅರಣ್ಯ-ಬಿ)
10/3/2021

**ಇವರಿಗೆ:-**

1. ಮಹಾಲೇಖಪಾಲರು (ಲೆಕ್ಕ ಪರಿಶೋಧನೆ) ಕರ್ನಾಟಕ ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ ನಿರ್ವಹಣೆ), ಅರಣ್ಯ ಭವನ, ಮಲ್ಲೇಶ್ವರಂ ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮ, ವನ ವಿಕಾಸ, ಮಲ್ಲೇಶ್ವರಂ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ವನ ವಿಕಾಸ, ಮಲ್ಲೇಶ್ವರಂ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಎಂ.ಜಿ.ರೋಡ್, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ರಾಜಾಜಿನಗರ, ಬೆಂಗಳೂರು.
9. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ ನಿರ್ವಹಣೆ/territorial circles)/ಉಪ ಅರಣ್ಯ ಸಂರಕ್ಷಣಾಧಿಕಾರಿ(territorial divisions) (ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಸಂಪನ್ಮೂಲ ನಿರ್ವಹಣೆ) ರವರ ಮುಖಾಂತರ.
10. ಎಲ್ಲಾ ಶ್ರೀಗಂಧದ ಕೋಠಿಗಳು/ಸಂಗ್ರಹಾಲಯಗಳು/ಡಿಪೋಗಳು(ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ ನಿರ್ವಹಣೆ) ರವರ ಮುಂಖಾತರ.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-3

| ಕ್ರ. ಸಂ. | ಸಿದ್ಧಪಡಿಸಿದ ಶ್ರೀಗಂಧದ ಮರದ ವಿವಿಧ ವರ್ಗೀಕರಣಗಳು | 2018-19 ರಿಂದ 2023ರ ಅಕ್ಟೋಬರ್ ವರೆಗೆ ಚಾಲ್ತಿಯಿದ್ದ ದರಗಳು (ಪ್ರತಿ ಕೆ. ಜಿ. ಗೆ) | ಪರಿಷ್ಕೃತ ಪ್ರಸ್ತುತ ದರಗಳು (ಪ್ರತಿ ಕೆ. ಜಿ. ಗೆ) |
|---|---|---|---|
| 1 | ಮೊದಲ ದರ್ಜೆಯ ಬಿಲ್ಲೆಟ್‌ಗಳು (ಅಥವಾ ವಿಲಾಯೆಟ್ ಬುದ್) | 7,865 | 7,865 |
| 2 | ಎರಡನೇ ದರ್ಜೆಯ ಬಿಲ್ಲೆಟ್‌ಗಳು (ಅಥವಾ ಚೀನಾ ಬುದ್) | 8,333 | 8,333 |
| 3 | ಮೂರನೇ ದರ್ಜೆಯ ಬಿಲ್ಲೆಟ್‌ಗಳು (ಅಥವಾ ಪಂಜಾಮ್) | 7,553 | 7,553 |
| 4 | ಘೋಟ್ಲಾ (ಅಥವಾ ಸಣ್ಣ ಉದ್ದದ ಬಿಲ್ಲೆಟ್‌ಗಳು) | 6,410 | 6,410 |
| 5 | ಘಾಟ್ ಬದಲಾ | 7,566 | 7,566 |
| 6 | ಬಾಗ್ರದಾದ್ | 7,280 | 7,280 |
| 7 | ರೂಟ್ (ಪ್ರಥಮ ದರ್ಜೆ) | 4,920 | 4,920 |
| 8 | ರೂಟ್ (ಎರಡನೇ ವರ್ಗ) | 4,980 | 4,980 |
| 9 | ರೂಟ್ (ಮೂರನೇ ವರ್ಗ) | 5,100 | 5,100 |
| 10 | ಜಾಜ್ಪೋಕಲ್ (ಪ್ರಥಮ ದರ್ಜೆ) | 6,450 | 6,450 |
| 11 | ಜಾಜ್ಪೋಕಲ್ (ಎರಡನೇ ತರಗತಿ) | 6,125 | 6,125 |
| 12 | ಐನ್ ಬಗರ್ ಸ್ಪ್ರೂಡೋಘಾಟ್ | 6,600 | **7,260** |
| 13 | ಚೆರಿಯಾ (ಅಥವಾ ದೊಡ್ಡ ಚಿಲ್ಟಾ) ಸಾಲಿ | 4,350 | **4,785** |
| 14 | ಐನ್ ಚಿಲ್ಟಾ | 4,386 | **4,825** |
| 15 | ಹತ್ರಿ ಚಿಲ್ಟಾ | 2,585 | **2,714** |
| 16 | ಮಿಲ್ವಾ ಚಿಲ್ಟಾ | 2,153 | **2,261** |
| 17 | ಬಸೋಲಾ ಬುಕ್ಕಿ (ಗಮ್ಟಿಟಾಚಾ ಶಾರ್ಟ್ ಚಿಪ್ಸ್) | 1,728 | **1,814** |
| 18 | ಧೂಳು ಅಥವಾ ಪುಡಿ | 750 | 750 |
| 19 | ಬಿಳಿ ಚಿಪ್ಸ್ | 46 | 46 |
| 20 | ತೊಗಟೆ ಮತ್ತು ತ್ಯಾಜ್ಯ | 14 | 14 |

ಮೇಲಿನ ಪಟ್ಟಿಯಲ್ಲಿ ನಮೂದಿಸಿದಂತೆ, ಕ್ರ ಸಂ. 12 ರಿಂದ 17 ರವರೆಗಿನ ಶ್ರೀಗಂಧದ ಮರಗಳ ವರ್ಗಗಳು ರೈತರಿಂದ ಅಧಿಕವಾಗಿ ಲಭಿಸುತ್ತಿರುವುದರಿಂದ, ರೈತರಿಗೆ ಅನುಕೂಲವಾಗುವಂತೆ, ಈ ವರ್ಗಗಳಿಗೆ ದರವನ್ನು ಪರಿಷ್ಕರಿಸಲಾಗಿದೆ.